(5) ಹೆಗ್ಗಡದೇವನಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಆಲನಹಳ್ಳಿ ಗ್ರಾಮದ ಕೆರೆಯನ್ನು ಮಿಾನು ಸಾಕಲಂ ಗುತ್ತಿಗೆಗೆ ಕೊಟ್ಟಿರುವ ಬಗ್ಗೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೆ,

"ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ ಆಲನಹಳ್ಳಿ ಗ್ರಾಮ ಹಾಗೂ ಅಕ್ಕಪಕ್ಕದ ಕೆರೆಗಳನ್ನು ಮಿಾನುಗಾರಿಕೆ ಇಲಾಖೆಯವರು ಮಿಾನು ಸಾಕಲು ಗುತ್ತಿಗೆಗೆ ಕೊಟ್ಟಿರುತ್ತಾರೆ. ಆಲನಹಳ್ಳಿಯ ದೇವಲಾಪುರ ಕೆರೆಯನ್ನು ಮೈಸೂರು ಜಿಲ್ಲೆಯ ಮಿಾನು ಕೃಷಿ ಅಭಿವೃದ್ಧಿ ಸಂಸ್ಥೆಯ ವಿಸ್ತರಣಾಧಿಕಾರಿಯವರು ತಮ್ಮ ಹತ್ತಿರದ ಸಂಬಂಧಿಕರೊಬ್ಬರಿಗೆ ಕೊಟ್ಟಿರುತ್ತಾರೆ. ಹಾಗೂ ಸುತ್ತ ಮುತ್ತಲ ಕೆರೆಗಳನ್ನೂ ತಮ್ಮ ಸಂಬಂಧಿಕರಿಗೇ ಕೊಟ್ಟುಕೊಂಡಿರುತ್ತಾರೆ. ಆಲನಹಳ್ಳಿ ಹಾಗೂ ಸುತ್ತಮುತ್ತಲ ಗ್ರಾಮಗಳ ಸುಮಾರು ಎಂಟು ಸಾವಿರ ಜನರಿಗೆ ಈ ಕೆರೆಯ ನೀರೇ ಕುಡಿಯಲು ಹಾಗೂ ಜಾನುವಾರುಗಳ ಉಪಯೋಗಕ್ಕೂ ಆಧಾರವಾಗಿರುತ್ತದೆ. ಈಗ ಮಿಾನು ಸಾಕಣೆ ಕಾರ್ಯ ಕೈಕೊಂಡಿರುವುದರಿಂದ ಮೇಲ್ಕಂಡ ಕೆರೆಗಳಲ್ಲಿ ಗೊಬ್ಬರ ಮತ್ತಿತರ ರಸಾಯನಿಕ ವಸ್ತುಗಳನ್ನು ಮಿಾನುಗಳ ಆಹಾರಕ್ಕಾಗಿ ಉಪಯೋಗಿಸುತ್ತಿರುವುದರಿಂದ ಕೆರೆಗಳ ನೀರು ಕಟ್ಟು ದುರ್ವಾಸನೆಯಿಂದ ಕೂಡಿರುವುದರಿಂದ ಜನ ಜಾನುವಾರುಗಳು ಇದೇ ನೀರನ್ನು ಕುಡಿಯಲು ಉಪಯೋಗಿಸಬೇಕಾಗಿರುತ್ತದೆ. ಇದರಿಂದಾಗಿ ರೋಗ ಹರಡಿದ್ದು ಜನರು ನರಳುತ್ತಿರುವುದಲ್ಲದೆ ನೂರಾರು ದನಕರುಗಳು ಸತ್ತಿವೆ. ಕೆರೆಗೆ ಸ್ನಾನ ಮಾಡಲು ಹಾಗೂ ಬಟ್ಟೆ ತೊಳೆಯಲು ಹೋದ ಜನರನ್ನು ಮಿಾನು ಹಿಡಿಯಲು ಬಂದಿರುವುದಾಗಿ ಆರೋಪ ಹೊರಿಸಿ ಹೊಡೆದಂ ಬಡಿದಿರುವುದಲ್ಲದೆ ಅನೇಕ ವಿಧವಾದ ಕಿರುಕುಳವನ್ನೂ ಕೊಟ್ಟಿದ್ದಾರೆ. ಈ ಕಿರುಕುಳಕ್ಕೆ ಹರಿಜನ - ಗಿರಿಜನರು ತುತ್ತಾಗಿದ್ದಾರೆ. ಇದಕ್ಕೆಲ್ಲಾ ಮೈಸೂರಿನ ಮಿಾನು ಕೃಷಿ ಅಭಿವೃದ್ಧಿ ಸಂಸ್ಥೆಯ ವಿಸ್ತರಣಾಧಿಕಾರಿಯವರೇ ಕಾರಣರಾಗಿದ್ದು ಇಲಾಖೆಯ ಅಧಿಕಾರಿಗಳನ್ನು ಕೈಗೊಂಬೆಗಳಾಗಿ ಮಾಡಿಕೊಂಡು ಮನಬಂದಿ ಹಾಗೂ ದೂರುಗಳ ಮೇಲೆ ಯಾವ ಕ್ರಮವನ್ನೂ ಕೈಕೊಳ್ಳದಿರುವುದರಿಂದ ಮೇಲ್ಕಂಡ ಗ್ರಾಮಸ್ಥರು ಕುಡಿಯಂವ ನೀರಿಗೂ ಕೂಡ ತೊಂದರೆ ಪಡುವಂತಹ ಪರಿಸ್ಥಿತಿ ಉಂಟಾಗಿದ್ದು ಈ ವಿಷಯವನ್ನು ಅವರು ಮಿಾನುಗಾರಿಕೆ ನಿರ್ದೇಶಕರು ಹಾಗೂ ಮಿಾನುಗಾರಿಕೆ ಸಚಿವರಿಗೆ ತಿಳಿಸಿದ್ದು ಇದರಿಂದಲೂ ಯಾವ ಪ್ರಯೋಜನವೂ ಆಗದಿರುವುದರಿಂದ ಸರಕಾರದವರು ಕೂಡಲೇ ಮೇಲ್ಕಂಡ ಅಧಿಕಾರಿಯ ಮೇಲೆ ಕ್ರಮ ಕೈಕೊಳ್ಳುವುದಲ್ಲದೆ ಅವರನ್ನು ಆ ಸ್ಥಳದಿಂದ ವರ್ಗಾಯಿಸಿ ಅವರು ಗುತ್ತಿಗೆಗೆ ಕೊಟ್ಟಿರುವ ಜನರಿಂದ ಕೆರೆಗಳನ್ನು ಬಿಡಿಸಿ ನೀರನ್ನು ಶುದ್ಧಿಗೊಳಿಸಿ ಕುಡಿಯುವ ನೀರಿನ ಅನುಕೂಲ ಮಾಡಿಕೊಡಬೇಕೆಂದು ಸರಕಾರದವರನ್ನು ಒತ್ತಾಯಿಸುತ್ತೇನೆ."

ಶ್ರೀ ಸಿ. ಬೈರೇಗೌಡ (ಮಿೀನುಗಾರಿಕೆ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಣ್ಣನವರ ಪ್ರಶ್ನೆಗೆ ಈ ಕೆಳಗಿನ ಹೇಳಿಕೆಯನ್ನು ಮಾಡಬಯಸುತ್ತೇನೆ.

೨-೦೦ ಪಿ. ಎಂ.

ಆಲನಹಳ್ಳಿ ಗ್ರಾಮದ ದೇವಲಾಪುರ ಕೆರೆಯನ್ನು ಮಿಾನು ಕೃಷಿಕರ ಅಭಿವೃದ್ಧಿ ಸಂಸ್ಥೆ ಮೈಸೂರು ಇವರಿಂದ ತರಬೇತಿ ಹೊಂದಿದ್ದ ಶ್ರೀ ಕಾಳಸ್ವಾಮಿ ಅವರಿಗೆ ೫ ವರ್ಷದವರೆಗೆ ಮಿಾನುಗಾರಿಕೆ ಅಭಿವೃದ್ಧಿ ಕೈಗೊಳ್ಳುವ ಸಲುವಾಗಿ ಗುತ್ತಿಗೆಗೆ ಕೊಡಲಾಗಿದೆ. ಇದರ ಅವಧಿ ತಾರೀಖು ೧-೧-೧೯೮೫ ರಿಂದ ೩೧-೧೨-೧೯೮೯ ರವರೆಗೆ.

ಆಲನಹಳ್ಳಿ ಗ್ರಾಮದ ಸುತ್ತಮುತ್ತಲ ಕೆರೆಗಳನ್ನು ಮಿಾನುಗಾರಿಕೆ ವಿಸ್ತರಣಾಧಿಕಾರಿಯವರ ಸಂಬಂಧಿಗಳಿಗೆ ಗುತ್ತಿಗೆ ನೀಡಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ಈ ಗುತ್ತಿಗೆ ಬಗ್ಗೆ ಗ್ರಾಮಸ್ಥರಿಂದ ದೂರುಗಳು ಬಂದಿದ್ದು ಇದನ್ನು ಸಂಪೂರ್ಣವಾಗಿ ಮಿಾನುಗಾರಿಕೆ ಉಪ ನಿರ್ದೇಶಕರು, ಮೈಸೂರು ಅವರಿಂದ ವಿಚಾರಣೆ ಮಾಡಿಸಲಾಗಿ ಅವರ ವರದಿಯ ಪ್ರಕಾರ ಶ್ರೀ ಕಾಳಸ್ವಾಮಿ ಅವರು ಮಿಾನು ಕೃಷಿಕರ ಅಭಿವೃದ್ಧಿ ಸಂಸ್ಥೆಯ ಮಿಾನುಗಾರಿಕೆ ವಿಸ್ತರಣಾಧಿಕಾರಿಯವರ ಸಂಬಂಧಿ ಎಂದು ಗೊತ್ತಾಗಿದೆ.

ಸಂಸ್ಥೆಯಿಂದ ತರಬೇತಿ ನೀಡಿದಾಗ ಬೇರೆ ಯಾರೂ ಗ್ರಾಮದಿಂದ ತರಬೇತಿಗಾಗಿ ಮುಂದೆ ಬರಲಿಲ್ಲ.

ಸದರಿ ಗುತ್ತಿಗೆದಾರರು ಕೆರೆಯನ್ನು ಅಭಿವೃದ್ಧಿ ಪಡಿಸುತ್ತಿದ್ದಾರೆ. ಅದಕ್ಕಾಗಿ ಒಂದು ಚಿಕ್ಕ ತೊಟ್ಟಿಯನ್ನು ಕೆರೆಯ ಸಮೀಪದಲ್ಲಿ ಕಟ್ಟಿರುತ್ತಾರೆ.

ಈಗ ಮಿಾನುಗಾರಿಕೆ ಅಭಿವೃದ್ಧಿಗಾಗಿ ಕೆರೆಯಲ್ಲಿ ಕೋಳಿ ಗೊಬ್ಬರ, ಸಗಣಿ ಮತ್ತು ರಾಸಾಯನಿಕ ಗೊಬ್ಬರವನ್ನು ಹಾಕಿರುತ್ತಾರೆ. ಆದ್ದರಿಂದ ನೀರಿನಲ್ಲಿ ಬದಲಾವಣೆ ಆಗುವುದು ಸಹಜ.

ಸದರೀ ಗ್ರಾಮದಲ್ಲಿ ಇರುವುದು ಇದೊಂದೆ ಕೆರೆಯಾದ್ದರಿಂದ ಈ ಸಮಸ್ಯೆಯುಂಟಾಗಿದೆ. ಇದರಿಂದಾಗಿ ದನಕರುಗಳು ಸತ್ತಿರುವುದು, ಜನರಿಗೆ ಕಿರುಕುಳ ಉಂಟಾಗಿರುವುದು ನಮ್ಮ ಗಮನಕ್ಕೆ ಬಂದಿರುವುದಿಲ್ಲ, ಇದರ ಬಗ್ಗೆ ವಿಚಾರಿಸಲಾಗುವುದು.

ಈ ಪ್ರಯುಕ್ತವಾಗಿ ಈ ಕೆರೆಯ ಬಗ್ಗೆ ಗುತ್ತಿಗೆದಾರರು ಮತ್ತು ಗ್ರಾಮಸ್ಥರ ನಡುವೆ ಹೊಂದಾಣಿಕೆ ತರಲು ಮಿಾನು ಕೃಷಿಕರ ಅಭಿವೃದ್ಧಿ ಸಂಸ್ಥೆಗೆ ತಿಳಿಸಲಾಗುವುದು.

ಸಂಬಂಧಪಟ್ಟ ಮಿಾನುಗಾರಿಕೆ ವಿಸ್ತರಣಾಧಿಕಾರಿಯನ್ನು ವರ್ಗಾವಣೆ ಮಾಡಲು ಪರಿಶೀಲಿಸಲಾಗುವುದು.

ಓ) ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡದ ಸಹಕಾರಿ ಸಂಘಗಳ ಸಾಲಗಳವಸೂಲಿಗಾಗಿ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವ ಬಗ್ಗೆ

6 ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡದ ಸಹಕಾರ ಸಂಘಗಳ ಸಾಲಗಳ ವಸೂಲಿಗಾಗಿ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವ ಬಗ್ಗೆ

ಶ್ರೀ ಸಿ. ಎಂ. ರೇವಣ್ಣಸಿದ್ದಯ್ಯ.—ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡದ ಸಹಕಾರಿ ಸಾಲಗಳ ವಸೂಲಿಗಾಗಿ ರೈತರ ಭೂಮಿಯನ್ನು ಜಿಲ್ಲೆಯ ಡಿ.ಸಿ. ಯವರೇ ಯಾಲಂ ಮಾಡಿ ಸರ್ಕಾರದ ಸ್ವಾಧೀನ ಮಾಡಿಕೊಂಡಿರುವರು. ರೈತ ಸಂಘದ ಬೇಡಿಕೆಯನ್ನು ಮನ್ನಿಸಿ ೧೯೮೫ರಲ್ಲಿ ಸರ್ಕಾರವು ಬಾಕಿ ಇದ್ದ ರೈತ ತನ್ನ ಸಾಲ ಪೂರಾ ಕಟ್ಟಿದಿದ್ದಲ್ಲಿ ಆತನ ಭೂಮಿಯನ್ನು ವಾಪಸ್ಸು ಕೊಡಲು ಆಜ್ಞೆ ಹೊರಡಿಸಿದೆ.

ಆ ಪ್ರಕಾರ ರೈತರು ತಮ್ಮ ಬಾಕಿ ಮೊತ್ತ ಕಟ್ಟಿ ಜಿಲ್ಲಾಧಿಕಾರಿಗಳಿಗೆ ತಮ್ಮ ಭೂಮಿಯನ್ನು ವಾಪಸ್ಸು ಬಿಡಲು ಅರ್ಜಿ ಹಾಕಿ ಒಂದು ವರ್ಷ ಮೀರಿ ಹೋಗಿದೆ ಆದರೂ ಭೂಮಿಗಳನ್ನು ವಾಪಸ್ಸು ಬಿಡುವ ಆರ್ಡರ್ ಆಗಿಲ್ಲ. ಇದರಿಂದ ಬಡ ರೈತರಿಗೆ ತೀರಲಾರದ, ಸಹಿಸಲಾರದ ತೊಂದರೆಯಾಗಿದೆ. ಪ್ರಯುಕ್ತ ಮಾನ್ಯ ಕಂದಾಯ ಮಂತ್ರಿಗಳು ಕಂದಾಯ ಕಮೀಷನ್‌ರವರ ದ್ವಾರ ರೈತರಿಗೆ ತಕ್ಷಣ ಭೂಮಿ ಸ್ವಾಧೀನಪಡಿಸುವ ಆಜ್ಞೆ ಕಳುಹಿಸಲು ಸಲಹೆ ಮಾಡುತ್ತೇನೆ. ತಡವಾದರೆ ತೀರಲಾರದ ನಷ್ಟ ವಾಗುತ್ತದೆಂದು ಈ ಮೂಲಕ ತಿಳಿಯಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—ಕಾನೂನು ಪ್ರಕಾರ ಅರ್ಹರಾದ ರೈತರಿಗೆ ಭೂಮಿ ಕೊಡಲಿಕ್ಕೆ ಕೂಡಲೇ ಆದೇಶ ಕೊಡುತ್ತೇನೆ.

7 ಮಧುಗಿರಿ ತಾಲ್ಲೂಕಿನ ಕೊಚಗೇನಹಳ್ಳಿ ಗ್ರಾಮದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ನೌಕರ ಶ್ರೀ ಕೆ. ನರಸೆಂಹಯ್ಯ ಎಂಬುವರನ್ನು ಕೊಲೆ ಮಾಡಿರುವ ವ್ಯಕ್ತಿಯನ್ನು ಬಿಡುಗಡೆ ಮಾಡಿರುವ ಬಗ್ಗೆ

ಶ್ರೀ ಎಸ್. ಬಂಗಾರಪ್ಪ. —ದಿನಾಂಕ ೮-೪-೧೯೮೫ರಂದು ಮಧುಗಿರಿ ತಾಲ್ಲೂಕಿನ ಕೊಡಿಗೇನ ಹಳ್ಳಿ ಗ್ರಾಮದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ನೌಕರರಾಗಿದ್ದ ಶ್ರೀ ಕೆ. ನರಸಿಂಹಯ್ಯ ಎಂಬುವರ ಕೊಲೆಯಾಗಿದ್ದು ಸಂಬಂಧಪಟ್ಟ ಆರೋಪಿಯನ್ನು ವಿಚಾರಣೆಗೊಳಪಡಿಸಲಾಗಿದೆ ಹಾಗೂ ಈ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಆದರೆ ಈ ಕೊಲೆಯ ಸಂಬಂಧ ಗ್ರಾಮದಲ್ಲಿ ಉಂಟಾದ ಗಲಭೆಯ ಪರಿಣಾಮವಾಗಿ ಕೆಲವು ಮುಗ್ಧ ಹರಿಜನರ ವಿರುದ್ಧ ಕೇಸು ದಾಖಲಾಗಿದ್ದು ಅವರು ಮಾತ್ರ ಕೋರ್ಟು ಕಛೇರಿಗಳಿಗೆ ಅಲೆಯುವಂತಾಗಿದೆ. ಮೊಕದ್ದಮೆಗೊಳಲಾದ ಹರಿಜನರು ಈ